# ಮಹಾತ್ಮಾ ಗಾಂಧೀಜಿಯವರ ಅಹಿಂಸೆ

**LOHIT .P**
Assistant Professor,
Department of Kannada,
Akshara Institute of Management Studies,
Akshara Nagara, Channamumbapura, Savalanga Road,
Shivamogga - 577204

ಮುತ್ತಿನಂತಹ ಕಣ್ಣೀರು ಹನಿಗಳು ಅವರ ಕಪೋಲಗಳಿಂದ ಕೆಳಗುರುಳಿ ನಾನು ಬರೆದ ಕಾಗದವನ್ನು ತೋಯಿಸಿದವು. ಒಂದು ಕ್ಷಣ ಮಾತ್ರ ಅವರು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ಏನನ್ನೂ ಯೋಚಿಸುವಂತೆ ಕಂಡು ಬಂದರು. ಅನಂತರ ಅವರು ಆ ಕಾಗದವನ್ನು ಹರಿದು ಬಿಟ್ಟರು. ಆ ಕಾಗದವನ್ನು ಓದಬೇಕೆಂದು ಹಾಸಿಗೆಯಲ್ಲಿ ಎದ್ದು ಕುಳಿತುದ್ದವರು ಮತ್ತೊಮ್ಮೆ ಮಲಗಿದ್ದರು. ನಾನು ಅತ್ತೆ. ಆ ಪ್ರೇಮಪೂರಿತ ಹನಿಗಳು ನನ್ನ ಹೃದಯವನ್ನು ನಿರ್ಮಲಗೊಳಿಸಿದವು

ಎಂ.ಕೆ.ಗಾಂಧಿ

ಮಹಾತ್ಮಗಾಂಧೀಜಿಯವರ ಅಹಿಂಸಾ ತತ್ವಕ್ಕೆ ಈ ಘಟನೆ ಅಡಿಪಾಯವಾಯಿತು. ಅಹಿಂಸೆಯ ನಿಜಸ್ವರೂಪವನ್ನು ತಂದೆ ಮಗನ ಸಮಾಗಮದಲ್ಲಿ ಕಂಡುಕೊಂಡರು. ಚಿಕ್ಕವರಿದ್ದಾಗ ಜೀವನದಲ್ಲಿ ನಡೆದ ಒಂದ ಅಚಾತುರ್ಯ ಘಟನೆಯಿಂದಾಗಿ ನೊಂದುಕೊಂಡು. ಅದನ್ನು ತಂದೆ ತಾಯಿಗಳಿಗೆ ನೇರವಾಗಿ ತಿಳಿಸದೆ, ಪತ್ರದ ಮುಖಾಂತರ ತಿಳಿಸುತ್ತಾರೆ. ಆ ಸನ್ನಿವೇಶದಲ್ಲಿ ಕಾಬಾ ಗಾಂಧೀಜಿಯವರು ಮಾಡಿದ ರೀತಿ ಮುಂದಿನ ಮಗ ಮೋಹನದಾಸ ಅವರ ಬದುಕಿಗೆ ಆಧಾರವಾಯಿತು. ರಾಜ ಮಾರ್ಗವಾಯಿತು. ತಮ್ಮ ಹೋರಾಟದ ಬದುಕಿನಲ್ಲಿ ಅನುಸರಿಸಿದ್ದ ಮಾರ್ಗ ಹೋರಾಟವೆಂದರೆ ಹಿಂಸೆ ಎಂದರು.

'ದಯವಿಲ್ಲದ ಧರ್ಮವಾವುದಯ್ಯಾ ದಯಬೇಕು ಸಕಲ ಪ್ರಾಣಿಗಳಲ್ಲಿ ದಯವೇ ಧರ್ಮದ ಮೂಲವಯ್ಯಾ – ಎಂಬ ಬಸವಣ್ಣನವರ ಮಾತಿಗೆ ನಿದರ್ಶನವಾಗಿದ್ದರು. ಅವರು ಅವರ ಅಹಿಂಸೆ ಕೇವಲ ಮಾನವ ಕುಲಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಜೀವವಿರುವ ಪಶು, ಪ್ರಾಣಿ, ಪಕ್ಷಿ, ಮೊದಲಾದ ಸಂಕುಲದಲ್ಲಿಯೂ ಅದು ಎದ್ದು ಕಾಣುತ್ತಿದೆ. ಮಾನವ ಶ್ರೇಷ್ಟ ಜೀವಿ ಎಂಬುದನ್ನು ಒಪ್ಪಿಕೊಂಡರೂ, ಕೀಳು ವರ್ಗದ ಪ್ರಾಣಿಲೋಕವನ್ನು ಅವರು ತಿರಸ್ಕರಿಸಲಿಲ್ಲ. 'ನನಗಿರುವಂತೆ ಆ ಮೂಕ ಪಶು ಪ್ರಾಣಿಗಳೂ ಆತ್ಮವೊಂದನ್ನು ಪಡೆದಿವೆ ಎಂಬುದು ನನಗೆ ಖಚಿತವಾಗಿ ಗೊತ್ತು ಎಂದು ಯಾವಾಗಲು ಹೇಳುತ್ತಿದ್ದರು. ಆಕಳನ್ನು ಗಾಂಧೀಜಿಯವರು ಕರುಣೆಯ ಸಾಕ್ಷಾತ್ಕಾರ' – ವೆಂದು

ಕರೆಯುತ್ತಿದ್ದರು. ಆಕಳೊಂದಿಗೆ ಇಡೀ ಪ್ರಾಣಿ ಪ್ರಪಂಚವನ್ನು ಅಷ್ಟು ಪ್ರೀತಿಯಿಂದ ಕಾಣುತ್ತಿದ್ದರು.

ಆಕಳಿಗೆ ಹಿಂಸೆಮಾಡುವುದನ್ನು ಅವರು ಎಳ್ಳಷ್ಟು ಸಹಿಸುತ್ತಿರಲಿಲ್ಲ. ಹಾಲನ್ನು ಕರೆಯುವಾಗ ಆಕಳಿಗೆ ಹಿಂಸೆಯಾಗುತ್ತದೆ. ಎಂಬ ಕಾರಣದಿಂದ ಹಸುವಿನ ಹಾಲು ಕುಡಿಯುವುದನ್ನೆ ಬಿಟ್ಟರು. ಗಾಂಧೀಜಿಯವರು ಹೇಳುವಂತೆ ಅಹಿಂಸೆ ಕಾರ್ಯದ ಪರಾಕಾಷ್ಟವಾಗಿದೆ. ಪ್ರಜಾಸತ್ತಾತ್ಮಕ ವಿಧಾನವಾಗಿದೆ. ದುರ್ಬಲದವರು ಹೇಡಿಗಳೂ, ದುರ್ಬಲ ಮನಸ್ಸಿನವರು ಇದನ್ನು ಅನುಸರಿಸಿಕೊಂಡು ಬರಲು ಸಾಧ್ಯವಿಲ್ಲವೆಂಬುದು ಅವರ ಮಹಾನ್ ವಿಚಾರವಾಗಿತ್ತು.

ಭಾರತದೇಶದ ಸ್ವಾತಂತ್ರ್ಯಕ್ಕೆ ವಿಶಿಷ್ಟವಾದ ಅರ್ಥವಿದೆ. ಅದು ಅಹಿಂಸಾ ರೂಪದ ಸ್ವಾತಂತ್ರ್ಯ ಸತ್ಯ ಮಾರ್ಗದ ಸ್ವಾತಂತ್ರ್ಯ, ಇದಕ್ಕೆ ಮುಖ್ಯ ಕಾರಣ ಗಾಂಧೀಜಿಯವರ ವಿಚಾರ ಪ್ರಣಾಳಿಕೆ. ಸತ್ಯ ಮತ್ತು ಅಹಿಂಸೆಯನ್ನು ಹಿಡಿದ ಸ್ವಾತಂತ್ರ್ಯ ಎಂಬುದು ಅವರ ವಿಚಾರವಾಗಿತ್ತು. ಗಾಂಧೀಜಿಯವರಲ್ಲಿ ಸತ್ಯ ಮತ್ತು ಅಹಿಂಸೆ ಒಂದಕ್ಕೊಂದು ಪೂರಕವಾಗಿರುವ, ಬೇರ್ಪಡಿಸಲು ಅಸಾಧ್ಯವಾಗಿರುವ ಮಾರ್ಗದೊಳು ಹೊರಟವನೆ ಪಥವನ್ನು ಹಿಡಿದವನೆ ಸತ್ಯವಾಗಿ ವತರ್ಿಸುವನು, ಸತ್ಯದ ಮಾರ್ಗದೊಳು ಹೊರಟವನೆ ಅಹಿಂಸಾ ಭಾವನೆಯುಳ್ಳವನಾಗಿರುವನೆಂಬುದು ಅವರ ವಾದವಾಗಿತ್ತು. ಮಾನವ ಜೀವನದ ಮೂಲಭೂತ ತತ್ವಗಳಿವು. ಮತ್ತು ಅವುಗಳ ಅನುಸಂಧಾನವೇ ಜೀವನದ ಪರಮ ಧ್ಯೇಯವೆಂದು ಹೇಳುತ್ತಿದ್ದರು.

ಗಾಂಧೀಜಿಯವರ ಅಹಿಂಸಾ ತತ್ವದೊಳಗೆ ಅವರಿಟ್ಟ ವಿಶ್ವಪ್ರೇಮವನ್ನೆ ನಾವು ಗುರುತಿಸಬಹುದು. ಬ್ರಿಟಿಷರು ಭಾರತದಲ್ಲಿ ಎಂತಹ ಕ್ರೂರ ಕೆಲಸ ಮಾಡಿದ್ದರೂ ಎಷ್ಟೇ ಹಿಂಸೆ ಮಾಡಿದ್ದರೂ ಗಾಂಧೀಜಿಯವರ ಮನಸ್ಸು ವಿಮುಖಗೊಳಲಿಲ್ಲ. ಸೇಡಿಗೆ ಪ್ರತಿಸೇಡು ಮಾಡದೆ ಹಿಂಸೆಗೆ ಅಹಿಂಸೆಯ ಮಾರ್ಗವನ್ನು ಕಲ್ಪಿಸಿಕೊಂಡಿರುವರು.

ಅಹಿಂಸೆಯು ಗಾಂಧೀಜಿಯವರ ದೃಷ್ಟಿಯಲ್ಲಿ ಪ್ರಜಾಸತ್ತಾತ್ಮಕ ವಿಧಾನವಾಗಿದೆ. ಕಾಯಕ ದಲಿತರ ಮೇಲೆ ತುಂಬಾ ಪ್ರೀತಿಯನ್ನಿಟ್ಟುಕೊಂಡವರು. ವಿಶ್ವದಲ್ಲಿನ ಬಹುತೇಕ ಜನರು ಬಡತನವನ್ನು ಅನುಭವಿಸುವದು ಅನಿವಾರ್ಯವೆಂಬ ವಾದವನ್ನು ಅವರ ಅಚಲ ನಿಶ್ಚಯವಾಗಿತ್ತು. ಅಂತೆಯೇ ಅನ್ಯಾಯ, ಅಸಮಾನತೆ, ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಲು ಪ್ರಯತ್ನಿಸಿದರು. ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ಕೊನೆಯವರೆಗೂ ಹೋರಾಡಿದರು.

ಹೋರಾಟವೆಂದರೆ ಹಿಂಸಾಮಾರ್ಗವಲ್ಲವೆಂಬುದು ಅವರ ವಾದ. ಅಸಹಿಂಸೆಯ ಮಾರ್ಗದಿಂದಲೇ ತಮ್ಮ ಗುರಿಯನ್ನು ಸಾಧಿಸಲು ಉತ್ಸುಕರಾದರು. ಮತ್ತು

ಜಯಶಾಲಿಗಳಾದರು. ಬಂಡವಾಳಶಾಹಿಯನ್ನು ಹೊಡೆಯದಿರಿ ಬಡೆಯದಿರಿ. ಬಂಡವಾಳಶಾಹಿಯನ್ನು ಹೊಡೆದೋಡಿಸಿ, ಬಂಡವಾಳಗಾರರು ಮನುಷ್ಯರೆ. ಬಡವರನ್ನು ಹಿಂಸಿಸದಿರಿ ಅವರ ಮನಸ್ಸುನ್ನು ಪರಿವತರ್ಿಸಬೇಕು ಎಂದ.

ಗಾಂಧೀಜಿಯವರು ಕಲ್ಪಿಸಿಕೊಂಡು ಜಗತ್ತು. ರಾಷ್ಟ್ರ ಸಮಾಜ ಅವು ಅಹಿಂಸಾತ್ಮಕ ತಳಹದಿಯ ಮೇಲೆ ರಚಿತಗೊಂಡವುಗಳು. ನಮ್ಮ ಪ್ರಪಂಚ ಅಹಿಂಸಾ ತತ್ವವನ್ನು ಅಳವಡಿಸಿಕೊಂಡು ಬಡತನ, ದಾರಿದ್ರ್ಯ ರೋಗರುಜಿನಗಳನ್ನು ಹೊಡೆದೋಡಿಸಬೇಕು. ಸಮಾಜದಲ್ಲಿ ಬದಲಾವಣೆ ಅಗತ್ಯವಾಗಿದ್ದರೆ ಅದು ಅಹಿಂಸೆ ಮುಖಾಂತರವೇ ನಡೆಯಬೇಕು. ಒಂದು ಜಗತ್ತನ್ನು ಅಹಿಂಸಾತ್ಮಕ ತಳಹದಿಯ ಮೇಲೆ ಮಾತ್ರ ಕಟ್ಟಬಹುದು. ರಾಜ್ಯಗಳು, ವರ್ಗಗಳು ಮತ್ತು ವ್ಯಕ್ತಿಗಳು ಅಹಿಂಸಾಮಾರ್ಗವನ್ನು ಅನುಸರಿಸಬೇಕು.

ಧರ್ಮವಿರುವುದು ನಮ್ಮ ನಡತೆಯಲ್ಲಿ ನುಡಿಯಲ್ಲಿ ಇದ್ದ ಮಾತ್ರಕ್ಕೆ ಧರ್ಮ ಧರ್ಮವಾಗುವುದಿಲ್ಲ. ಧರ್ಮವು ಇರುವದು ತಾನು ಒಳ್ಳೆಯದಾಗಿ ಬದುಕಿ, ಇನ್ನೊಬ್ಬರೂ ಒಳ್ಳೆಯವರಾಗಿ ಬದುಕಲು ಅವಕಾಶ ಮಾಡಿಕೊಡುವುದಕ್ಕೆ. ಪ್ರತಿಯೊಬ್ಬ ಹಿಂದೂ ಉತ್ತಮ ಹಿಂದೂವಾಗಬೇಕು. ಪ್ರತಿಯೊಬ್ಬ ಕ್ರಿಶ್ಚಿನ್ನೊಬ್ಬ ಉತ್ತಮ ಕ್ರಿಶ್ಚಿಯನ್ ಆಗಬೇಕು. ಪ್ರತಿಯೊಬ್ಬ ಮುಸ್ಲಿಂ ಉತ್ತಮನಾಗಬೇಕು. ಬಾಪೂಜಿಯವರ ದೃಷ್ಟಿಯಲ್ಲಿ ಧರ್ಮಗಳು ಸಾಕ್ಷಾತ್ಕಾರ ಪಡೆಯಲು ಇರುವ ಬೇರೆ ಬೇರೆ ಮಾರ್ಗಗಳು ಮಾತ್ರ ಎಲ್ಲಾ ಧರ್ಮಗಳ ಆತ್ಮವೊಂದೇ ಎಂಬುದು ಅವರ ವಾದ.

ಗಾಂಧೀಜಿಯವರ ಬದುಕಿನ ಮರ್ಮವಾಗಿದ್ದ ಈ ಅಹಿಂಸಾ ಇಂದು ಭಾರತದೇಶದ ಬದುಕಿಗೆ ಆಧಾರವಾಗಿದೆ. ನಮ್ಮೆಲ್ಲರ ಅಚಲ ನಡೆಯು ಇದಾಗಬೇಕಿದೆ. ಎಲ್ಲಿ ನೋಡಿದಲ್ಲಿ ಅನ್ಯಾಯ, ಅತ್ಯಾಚಾರ, ಕೊಲೆ ಸುಲಿಗೆ – ಮುಂತಾದ ಹೇಯ ನಡತೆಗಳು ತುಂಬಿ ದೇಶವೆನ್ನುವದು ರಣರಂಗವಾಗಿದೆ. ಇತ್ತೀಚೆಗೆ ಮತ್ತೆ ಬಡವ ಶ್ರೀಮಂತ, ಹೆಣ್ಣು ಗಂಡುಗಳೆಂಬ ಮೇಲು–ಕೀಳು ಎಂಬ ಭಾವನೆಗಳು ಹೆಚ್ಚಾಗಿವೆ. ಗಾಂಧೀಜಿಯವರು ಕಲಿಸಿಕೊಟ್ಟ ಕರುಣೆ, ಪ್ರೇಮ, ಸತ್ಯ, ತ್ಯಾಗ, ಅಹಿಂಸೆ – ಮೊದಲಾದ ಮೌಲ್ಯಗಳು ನಮ್ಮವಾಗಬೇಕಾಗಿದೆ.

## –: ಆಧಾರ ಗ್ರಂಥ :–


1. ಇಂಟನರ್◌ೆಟ್
2. ಮಹಾತ್ಮಾ ಗಾಂಧಿ
3. ನಿಯತ ಕಾಲಿಕೆಗಳು
4. ದಿನಪತ್ರಿಕೆ
5. ಜರ್ನಲ್ಸ್